1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

<u>ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಪ್ಪ | ಪಿ.ಡಬ್ಲ್ಯೂ. | 03 |
| ತಂದೆಯ ಹೆಸರು | ಕರಿಯ | ಸಿ.ಡಬ್ಲ್ಯೂ. | 01 |
| ವಯಸ್ಸು | 37 ವರ್ಷ | | |
| ಉದ್ಯೋಗ | ಸೂಪರ್ ವೈಸರ್ | | |
| ವಾಸಸ್ಥಳ | ಉಜಿನಿ | | |

ದಿಃ 27.07.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು. ಚಾಸಾ.5 ನನ್ನ ತಮ್ಮ. ಚಾಸಾ.2 ನನ್ನ ಅತ್ತೆ. ಚಾಸಾ.2 ರಿಂದ 4 ಹಾಗೂ 8 ಮತ್ತು 9 ರವರು ಪರಿಚಯವಿದ್ದಾರೆ.

2. ದಿಃ 08.01.2018 ರಂದು ನಾನು ಸ್ವಂತ ಕೆಲಸದ ನಿಮಿತ್ತ ಬಾಳೆಹೊನ್ನೂರಿಗೆ ಹೋಗಿದ್ದೆ. ನಂತರ ಕೆಲಸ ಮುಗಿಸಿಕೊಂಡು ಸಂಜೆ 4.30 ಕ್ಕೆ ಸಾರಿಗೆ ಬಸ್ಸಿನಲ್ಲಿ ಚಾಸಾ.2 ಮತ್ತು 3 ರವರೊಂದಿಗೆ ಬರುತ್ತಿದ್ದೆ. ಸಂಜೆ 5.00 ಕ್ಕೆ ಖಾಂಡ್ಯ ದೇವಾಲಯದ ಆರ್ಚ್ ಬಳಿ ಬಸ್ಸು ಹೋಗುವಾಗ ನಾನು ಡೋರ್ ಪಕ್ಕದಲ್ಲಿ ನಿಂತಿದ್ದೆ. ಆರೋಪಿಗಳು ರಸ್ತೆ ಮಧ್ಯದಲ್ಲಿ ಪೋನು ಮಾಡಿಕೊಂಡು ನಿಂತಿದ್ದರು. ಆಗ ನಾನು ಆರೋಪಿತರಿಗೆ ಸೈಡಿಗೆ ಹೋಗುವಂತೆ ಹೇಳಿದೆ. ಅದಕ್ಕೆ ಆರೋಪಿತರು ನನಗೆ ಕೆಟ್ಟದಾಗಿ ಬೈದು ಜಗಳ ಮಾಡಿದರು. ನಂತರ ಬಸ್ಸು ಮುಂದೆ ಹೋಗಿ ಉಜಿನಿ ಬಸ್ಸು ಸ್ಟಾಂಡು ಬನ್ನಿ ಮಹಾಕಾಳಿ ದೇವಸ್ಥಾನದ ಬಳಿ ನಿಂತಿತು. ಆಗ ಆರೋಪಿತರು ನನ್ನನ್ನು ಬಸ್ಸಿನಿಂದ ಇಳಿ

ಯುವಂತೆ ಹೇಳಿದರು. ನಂತರ ಆರೋಪಿತರು ಬಸ್ಸಿನಿಂದ ನನ್ನ ಕೈ ಹಿಡಿದು ಎಳೆದು ನನ್ನ ಎಡ ಕಪಾಳಕ್ಕೆ, ಬಲಭುಜಕ್ಕೆ ಮತ್ತು ಕುತ್ತಿಗೆ ಬೆನ್ನಿಗೆ ಹೊಡೆದರು. ಅಲ್ಲದೆ ನಾನು ಧರಿಸಿದ್ದ ಬಟ್ಟೆಯನ್ನು ಹರಿದು ಹಾಕಿದರು. ನಂತರ ಆರೋಪಿತರು ಸೂಳೇ ಮಗನೇ, ಬೋಳಿ ಮಗನೆ, ಎಸ್.ಸಿ. ಜಾತಿನಾಡ ಎಂದು ಜಾತಿ ನಿಂದನೆ ಮಾಡಿದರು. ಅಲ್ಲಿಂದ ಆರೋಪಿತರು ಹೋಗುವಾಗ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು. ಚಾಸಾ.2 ಮತ್ತು 3 ರವರು ಜಗಳ ಬಿಡಿಸಿ ನನ್ನನ್ನು ಮನೆಗೆ ಕರೆದುಕೊಂಡು ಹೋಗಿ ಬಿಟ್ಟರು. ನಂತರ ರಾತ್ರಿ 8.00 ಗಂಟೆಗೆ ನನಗೆ ನೋವು ಜಾಸ್ತಿಯಾಗಿದ್ದರಿಂದ ನನ್ನ ತಾಯಿಯಾದ ಚಾಸಾ.7 ರವರ ಜೊತೆ ಆಟೋದಲ್ಲಿ ಕಡಬಗೆರೆಗೆ ಬಂದೆನು. ನಂತರ ಅಲ್ಲಿಂದ ಸರ್ಕಾರಿ ಬಸ್ಸಿನಲ್ಲಿ ಚಿಕ್ಕಮಗಳೂರು ಮಲ್ಲೆಗೌಡ ಆಸ್ಪತ್ರೆಯಲ್ಲಿ ದಾಖಲಾದೆನು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಕಾಲಕ್ಕೆ ಆರೋಪಿತರ ವಿರುದ್ಧ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತಿತದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಆ ದಿನ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸದರಿಯವರು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಆಗಿರುತ್ತಾರೆ.

3. ದೂರು ದಾಖಲಾದ ನಂತರ ಪೋಲೀಸರು ಮಹಜರು ಮಾಡಲು ದಿ:10.01.2018 ರಂದು ಸ್ಥಳಕ್ಕೆ ಬಂದಿದ್ದರು. ಆ ಸಮಯದಲ್ಲಿ ಪೋಲೀಸರಿಗೆ ನಾನೇ ಸ್ಥಳವನ್ನು ತೋರಿಸಿದೆನು. ಆ ಸಮಯದಲ್ಲಿ ಪಂಚರಾಗಿ ಚಾಸಾ.8

ಮತ್ತು 9 ರವರು ಇದ್ದರು. ನಾನು ಸ್ಥಳ ತೋರಿಸಿದ ಮೇರೆಗೆ ಪೋಲೀಸರು ಸ್ಥಳವನ್ನು ಪರಿಶೀಲಿಸಿ ಮಹಜರು ಜರುಗಿಸಿದರು. ಮೊದಲ ಮಹಜರನ್ನು ಉಜಿನಿ ಬಸ್ಸು ನಿಲ್ದಾಣದ ಮಹಾಕಾಳಿ ದೇವಸ್ಥಾನದ ಹತ್ತಿರ ಮಹಜರು ಜರುಗಿಸಿರುತ್ತಾರೆ. ನಂತರ ಮುಂದುವರೆದು ಮಹಜರನ್ನು ಖಾಂಡ್ಯ ಗೇಟಿನ ಹತ್ತಿರ ಇರುವ ಆರ್ಚ ಬಳಿ ಮಹಜರು ಜರುಗಿಸಿರುತ್ತಾರೆ. ಮಹಜರನ್ನು ಮಧ್ಯಾಹ್ನ 3.00 ರಿಂದ 5.00 ರವರೆಗೆ ಬರೆದಿರುತ್ತಾರೆ. ಸದರಿ ಮಹಜರಿಗೆ ನಾನು, ಚಾಸಾ.8 ಮತ್ತು 9 ರವರು ಸಹಿ ಮಾಡಿರುತ್ತೇವೆ. ಸದರಿ ಮಹಜರನ್ನು ನಿಪಿ.5 ಎಂದು, ನಿಪಿ.5 ರಲ್ಲಿ ಸಾಕ್ಷಿ ಗುರುತಿಸಿದ ತನ್ನ ಸಹಿಗಳನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ

4. ನಾನು 9 ನೇ ತರಗತಿವರೆಗೆ ಓದಿರುತ್ತೇನೆ. 2018 ಕ್ಕೂ ಮೊದಲು ನಾನು ಮತ ಚಲಾಯಿಸಿದ್ದೇನೆ ಮತ್ತು ಯಾರು ಯಾರಿಗೆ ಮತ ಚಲಾಯಿಸಿದ್ದೇನೆ ಎಂದು ಗೊತ್ತು. ಆ ದಿನ ಬಸ್ಸಿನಲ್ಲಿ ಚಾಸಾ.2 ಹಾಗುಾ 3 ರವರಲ್ಲದೆ ಬಸ್ಸು ತುಂಬ ಜನ ಇದ್ದರು. ಚಾಸಾ.2 ಮತ್ತು 3 ಹಾಗೂ ನಾನು ಒಂದೇ ಜಾತಿಯವರು ಮತ್ತು ಒಂದೇ ಊರಿನವರು. ಸದರಿ ಬಸ್ಸಿನಲ್ಲಿ ಇತರೆ ಜಾತಿಯವರು ಹಾಗೂ ನಮ್ಮ ಊರಿನವರು ಇದ್ದರು. ಸದರಿ ಬಸ್ಸಿನ ಡೋರಿಗೆ ಮೇಲ್ಭಾಗದಲ್ಲಿ ಗಾಜು ಇತ್ತು. ಆ ದಿನ ಬಸ್ಸಿನಲ್ಲಿ ಜಾಸ್ತಿ ಜನ ಇದ್ದಿದ್ದರಿಂದ ಒತ್ತೊತ್ತಾಗಿ ನಿಂತು ಬಾಗಿಲಿನ ಹತ್ತಿರ ನಾನು ನಿಂತಿದ್ದೆ ಎಂದರೆ ಸರಿ. ಆ ದಿನ ಬಸ್ಸಿನ ಕಂಡಕ್ಟರು ಯಾರು ಅಂತ ನೆನಪಿಲ್ಲ. ಬಸ್ಸಿನ ಚಾಲಕ

ನನಗೆ 2-3 ವರ್ಷದಿಂದ ಪರಿಚಯ.

5. ಯಾರಾದರೂ ಬಸ್ಸಿಗೆ ಅಡ್ಡ ಇದ್ದಾಗ ಹಾರನ್ ಮಾಡಿ ಅವರನ್ನು ಪಕ್ಕಕ್ಕೆ ಹೋಗುವಂತೆ ಹೇಳುವುದು ಡ್ರೈವರ್ ಕೆಲಸ ಹಾಗೂ ನನ್ನ ಕೆಲಸ ಅಲ್ಲ ಎಂದರೆ ಸರಿ. ಒಂದು ವೇಳೆ ಡ್ರೈವರ್ ಹಾರನ್ ಮಾಡಿದ ನಂತರ ವ್ಯಕ್ತಿಗಳು ಪಕ್ಕಕ್ಕೆ ಹೋಗದಿದ್ದರೆ ಕಂಡಕ್ಟರ್ ಬಸ್ಸಿನಿಂದ ಇಳಿದು ಅವರನ್ನು ಸರಿಸುತ್ತಾರೆ ಎಂದರೆ ಸರಿ.

6. ಕಡಬಗೆರೆಗೂ ಖಾಂಡ್ಯ ದೇವಸ್ಥಾನಕ್ಕೂ 2 ಕಿಮೀ ದೂರ ಆಗುತ್ತದೆ. ಕಡಬರೆಗೆಯಲ್ಲೂ ಸಹ ಒಂದು ಆರ್ಚ ಇದೆ ಎಂದರೆ ಸರಿ. ನನ್ನ ಹತ್ತಿರ, ನಮ್ಮ ಮನೆಯವರ ಹತ್ತಿರ ಮೊಬೈಲ್ ಫೋನು ಇದೆ. ದೂರಿನಲ್ಲಿ ಕಡಬಗೆರೆಯ ಖಾಂಡ್ಯ ದೇವಸ್ಥಾನದ ಆರ್ಚ ಬಳಿ ಎಂದು ಹೇಳಿದ್ದೇನೆ ಎಂದರೆ ಸರಿ. ಖಾಂಡ್ಯ ದೇವಸ್ಥಾನದ ಆರ್ಚ ಬಳಿ ಅರಣ್ಯ ಇಲಾಖೆಯ ಚೆಕ್ ಪೋಸ್ಟ ಇದೆ ಎಂದರೆ ಸರಿ. ಸದರಿ ಚೆಕ್ ಪೋಸ್ಟ ಸುತ್ತ ಮುತ್ತ ವಾಸದ ಮನೆಗಳು ಇವೆ ಎಂದರೆ ಸರಿ. ಚೆಕ್ ಪೋಸ್ಟ ಬಳಿ ಅರಣ್ಯ ಇಲಾಖೆಯ ಇಬ್ಬರು ಗಾರ್ಡಗಳು ಇರುತ್ತಾರೆ ಎಂದರೆ ಸರಿ.

7. ಸದರಿ ಖಾಂಡ್ಯ ದೇವಸ್ಥಾನದ ಆರ್ಚ ಬಳಿ ಗಲಾಟೆಯಾದಾಗ ಫಾರೆಸ್ಟ ಗಾರ್ಡಗಳಾಗಲಿ ಅಥವ ಅಕ್ಕಪಕ್ಕದ ಮನೆಯವರಾಗಲಿ ಬರಲಿಲ್ಲ. ಬಸ್ಸಿನಲ್ಲಿದ್ದ ಇತರೆ ಜಾತಿಯವರು ಬಂದು ಸಮಾದಾನ ಮಾಡಿದರು, ಆದರೆ ಅವರ ಹೆಸರು ಹೇಳಲು ಆಗಲಿಲ್ಲ. ತಕ್ಷಣಕ್ಕೆ ಫೋನು ಮೂಲಕ ನಾನಾಗಲಿ ಅಥವ ಬಸ್ಸಿನಲ್ಲಿದ್ದವರಾಗಲಿ ಪೋಲೀಸರಿಗೆ ವಿಷಯ ತಿಳಿಸಲಿಲ್ಲ. ನಮ್ಮ ಊರು ಹಾಗೂ ಆರೋಪಿಗಳ ಊರು ಬೇರೆ ಬೇರೆ ಎಂದರೆ ಸರಿ. ನಾನು ಆರೋಪಿತರ ಜೊತೆ ಓದಿದ್ದಾಗಲಿ ಅಥವ ಅವರ ಮನೆಯ ಕಾರ್ಯಕ್ರಮಕ್ಕೆ

ಹೋಗಿಲ್ಲ. ಆರೋಪಿತರ ತಂದೆಯ ಹೆಸರು ಮತ್ತು ಇತರೆ ವಿವರ ಗೊತ್ತಿಲ್ಲ.

8. ಖಾಂಡ್ಯ ದೇವಸ್ಥಾನದ ಆರ್ಚನಿಂದ ಮಹಾಕಾಳಿ ದೇವಸ್ಥಾನದ ಆರ್ಚ ವರೆಗೆ 4 ಮೀಟರ್ ಆಗುತ್ತದೆ. ಸದರಿ ರಸ್ತೆಯು ಸಿಂಗಲ್ ರಸ್ತೆಯಾಗಿದ್ದು ಎರಡು ವಾಹನಗಳು ಹೋಗುವಷ್ಟು ರಸ್ತೆ ಇಲ್ಲ ಎಂದರೆ ಸರಿ. ಗಲಾಟೆಯಾದ ದಿನ ಆರೋಪಿತರು ಯಾವ ಬಣ್ಣದ ಬಟ್ಟೆ ಹಾಕಿಕೊಂಡಿದ್ದರು ಮತ್ತು ಯಾವ ಬೈಕಿನಲ್ಲಿ ಬಂದಿದ್ದರು ಎಂದು ನೆನಪಿಲ್ಲ. ಕಡಬಗೆರೆಯಿಂದ ಉಜಿನಿವರೆಗೂ ಕಿರಿದಾದ ತಿರುವಿನಿಂದ ಕೂಡಿದ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಬಸ್ಸು ತುಂಬಾ ಜನ ಇದ್ದು ಹೋಗುವಾಗ ಒಬ್ಬರ ಮೇಲೆ ಒಬ್ಬರು ಬಸ್ಸಿಗೆ ತಗುಲಿಸಿಕೊಳ್ಳುವುದು ಸಾಮಾನ್ಯ ಎಂದರೆ ಸರಿ. ಆರೋಪಿತರು ಬಸ್ಸನ್ನು ಎಷ್ಟು ದೂರದಿಂದ ಚೇಸ್ ಮಾಡಿಕೊಂಡು ಬಂದರು ಮತ್ತು ಎಲ್ಲಿ ಓವರ್ ಟೇಕ್ ಮಾಡಿದರು ಎಂದು ಹೇಳಿಲ್ಲ. ಮಹಾಕಾಳಿ ದೇವಸ್ಥಾನ ನಮ್ಮ ಊರಿನಲ್ಲಿದೆ ಎಂದರೆ ಸರಿ. ಮಹಾಕಾಳಿ ದೇವಸ್ಥಾನದ ಹತ್ತಿರ ನಮ್ಮ ಉ‍ಾರಿನ ನಮ್ಮ ಜಾತಿಯವರು ಸಾಕಷ್ಟು ಜನ ಇದ್ದಾರೆ ಎಂದರೆ ಸರಿ. ಚಾಸಾ.2 ಮತ್ತು 3 ರವರನ್ನು ಹೊರತುಪಡಿಸಿ ಆ ದಿನ ಘಟನೆಯನ್ನು ಯಾರು ನೋಡಿರುವ ಎಂದು ಹೇಳಲು ಆಗುವುದಿಲ್ಲ. ದೇವಸ್ಥಾನದ ಬಳಿ ಸಂಜೆ 5.00 ಗಂಟೆಗೆ ನಮ್ಮೂರಿನವರು ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ನಮ್ಮೂರಿನವರೊಂದಿಗೆ ನನ್ನ ವಿಶ್ವಾಸ ಚೆನ್ನಾಗಿದೆ. ಆ ದಿನ ಚಾಸಾ.2 ಮತ್ತು 3 ರವರನ್ನು ಹೊರತುಪಡಿಸಿ ಜಗಳ ಯಾರು ಬಿಡಿಸಿದರು ಎಂದು ಹೇಳಲು ಈಗ ನೆನಪಿಲ್ಲ. ಗಲಾಟೆಯು 5.00 ಗಂಟೆಗೆ ಪ್ರಾರಂಭವಾಗಿ 10-15 ನಿಮಿಷದವರೆಗೂ ಆಗಿರುತ್ತದೆ. ಗಲಾಟೆಯಾದಾಗ

ಆ ದಿನ ನಮ್ಮೂರಿನವರು ಆರೋಪಿತರನ್ನು ಹಿಡಿಯಲಿಲ್ಲ.

9. ಆರೋಪಿತರ ಪೈಕಿ ನನ್ನ ಕಪಾಳಕ್ಕೆ, ಭುಜಕ್ಕೆ, ಬೆನ್ನಿಗೆ ಯಾರು ಹೊಡೆದರು ಎಂದು ಹೇಳಿಲ್ಲ. ನನ್ನ ಬಟ್ಟೆ ಎಳೆದಾಗ ಮೈಮೇಲೆ ಗುರುತು ಬಿದ್ದಿತ್ತು. ಆ ಗುರುತನ್ನು ವೈದ್ಯರಿಗೆ ತೋರಿಸಿ ಬಟ್ಟೆ ಎಳೆದಾಗ ಆಗಿತ್ತು ಅಂತ ಹೇಳಿಲ್ಲ. ಆ ದಿನ ನಾನು ಬಿಳಿ ಬಣ್ಣದ ಟೀ ಶರ್ಟು ಹಾಕಿದ್ದೆ, ಮನೆಗೆ ಹೋಗುವಾಗ ನಾನು ಅದನ್ನು ತೆಗೆದುಕೊಂಡು ಹೋಗಲಿಲ್ಲ. ಮಹಾಕಾಳಿ ದೇವಸ್ಥಾನದಿಂದ ಕಿಮೀ ದೂರದಲ್ಲಿ ನಮ್ಮ ಮನೆ ಇದೆ. ಮಹಾಕಾಳಿ ದೇವಸ್ಥಾನದಿಂದ ನಮ್ಮ ಊರಿಗೆ ಅದೇ ಬಸ್ಸಿನಲ್ಲಿ ಹೋದೆ. ಖಾಂಡ್ಯ ದೇವಸ್ಥಾನದ ಬಳಿ ಹಾಗೂ ಮಹಾಕಾಳಿ ದೇವಸ್ಥಾನದ ಬಳಿ ಹಾಗೂ ನಮ್ಮ ಮನೆಯವರ ಸುತ್ತ ಮುತ್ತ ಇರುವವರ ಬಳಿ ವಾಹನಗಳು ಇವೆ ಎಂದರೆ ಸರಿ. ನನ್ನ ಕಪಾಳಕ್ಕೆ ಹೊಡೆದಾಗ ನಾಲ್ಕು ಬೆರಳುಗಳ ಗುರುತು ಬಿದ್ದತ್ತು. ನಾನು ಮನೆಗೆ ಹೋದಾಗ ಸಂಜೆ 5.30 ಆಗಿತ್ತು. ನಮ್ಮ ಊರಿನ ಪಕ್ಕ ಶಾಸಕ ರಾಜೇಗೌಡರ ಊರು ಎಂದರೆ ಸರಿ. ಮನೆಗೆ ಹೋದ ನಂತರ ಘಟನೆಯನ್ನು ಯಾರ ಗಮನಕ್ಕೂ ತಂದಿಲ್ಲ. ನಮ್ಮೂರಿನಿಂದ ಚಿಕ್ಕಮಗಳೂರಿಗೆ ಬರಬೇಕಾದರೆ ಬಸಾಪುರದಿಂದ ಬಂದರೆ ಹತ್ತಿರವಾಗುತ್ತದೆ ಎಂದರೆ ಸರಿಯಲ್ಲ. ನಮ್ಮೂರಿನಲ್ಲಿ ಖಾಸಗಿ ಕ್ಲಿನಿಕ್, ಬಾಳೆಹೊನ್ನೂರಿನಲ್ಲಿ ಸರ್ಕಾರಿ ಆಸ್ಪತ್ರೆ, ಕಣತಿ ಹಾಗೂ ಆಲ್ದೂರಿನಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನೋವು ಜಾಸ್ತಿಯಾದಾಗ ಹತ್ತಿರದ ವೈದ್ಯರ ಬಳಿ ಹೋಗುತ್ತೇವೆ ಎಂದರೆ ಸರಿ. ಯಾರ ಆಟೋದಲ್ಲಿ ಕಡಬಗೆರೆ ತನಕ ಬಂದೆ ಎಂದು ನೆನಪಿಲ್ಲ.

10. ಎಂ.ಜಿ.ಆಸ್ಪತ್ರೆಗೆ ಬಂದಾಗ ರಾತ್ರಿ 10.30 ಆಗಿತ್ತು. ನನ್ನ ಹೇಳಿಕೆಯಲ್ಲಿ ಆರೋಪಿತರು ಯಾವ ರೀತಿ ಜಾತಿ ನಿಂದನೆ ಮಾಡಿದರು ಎಂದು ಹೇಳಿಲ್ಲ ಎಂದರೆ ಸರಿ. ನಿಪಿ.4 ನ್ನು ಓದಿ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿ. ಒಂದು ವೇಳೆ ನಾನು ಹೇಳಿದಂತೆ ನಿಪಿ.4 ನ್ನು ಬರೆಯದಿದ್ದರೆ ನಾನು ಹೇಳಿ ಸರಿ ಮಾಡಿಸುತ್ತಿದ್ದೆ ಎಂದರೆ ಸರಿ. ನಾನು ಆಸ್ಪತ್ರೆಯಿಂದ ಮಾರನೇ ದಿನ ಸಂಜೆ 7.00 ಗಂಟೆಗೆ ಡಿಸ್ಚಾರ್ಜ್ ಆಗಿರುತ್ತೇನೆ.

11. ಪೋಲೀಸರು ಮಹಜರಿಗೆ ಬರುವಂತೆ ನನಗೆ ನೋಟೀಸು ಕೊಟ್ಟಿಲ್ಲ. ಚಾಸಾ.8 ಮತ್ತು 9 ರವರು ನಮ್ಮೂರಿನ ನನ್ನ ಜಾತಿಯವರು. ನಿಪಿ.5 ರ ಪೂರ್ಣ ಮಾಹಿತಿ ಹೇಳಲು ಈಗ ನನಗೆ ನೆನಪಿಲ್ಲ. ಆ ದಿನ ನಾನು ಧರಿಸಿದ್ದ ಬಿಳಿ ಬಣ್ಣದ ಟೀಶರ್ಟನ್ನು ಇಲ್ಲಿಯತನಕ ನಾನು ಪೋಲೀಸರಿಗೆ ಕೊಟ್ಟಿಲ್ಲ. ನನಗೂ ಆರೋಪಿತರಿಗೂ ಯಾವುದೇ ಹಳೆಯ ದ್ವೇಷ ಇರಲಿಲ್ಲ. ಅಟ್ರಾಸಿಟಿ ಕಾಯಿದೆಯಡಿ ಸರ್ಕಾರದಿಂದ ಏನು ಸೌಲಭ್ಯ ಇದೆ ಎಂದು ನನಗೆ ಇಲ್ಲಿಯವರೆಗೆ ಮಾಹಿತಿ ಇಲ್ಲ. ನಮ್ಮ ಮನೆಯಲ್ಲಿ ಬಡತನ ಇದೆ ಎಂದರೆ ಸರಿ. ಸಾಮಾನ್ಯವಾಗಿ ಬಸ್ಸಿನ ಡೋರು ಬಳಿ ನಿಂತಾಗ ಬಸ್ಸು ಅಲ್ಲಾಡಿದಾಗ ಬಾಗಿಲಿಗೆ ತಾಕಿ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಆ ದಿನ ಬಸ್ಸಿನಲ್ಲಿ ಹೋಗುವಾಗ ತಿರುವಿನಲ್ಲಿ ಬಸ್ಸು ಹೋಗುವಾಗ ಬಸ್ಸು ನನಗೆ ತಾಕಿದ್ದರಿಂದ ನನಗೆ ಗಾಯಗಳಾಗಿದ್ದನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರು ಕೊಡುವ ತನಕ ನನ್ನ ಬಗ್ಗೆ ಆರೋಪಿತರಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಬಸ್ಸಿನಲ್ಲಿ ಪ್ರಯಾಣ ಮಾಡಿದ ಬಗ್ಗೆ ಟಿಕೆಟ್ಟನ್ನು ಪೋಲೀಸರಿಗೆ ಕೊಟ್ಟಿಲ್ಲ.

12. ದಿಃ **08.01.2018** ರಂದು ನಾನು ಸ್ವಂತ ಕೆಲಸದ ನಿಮಿತ್ತ ಬಾಳೆಹೊನ್ನೂರಿಗೆ ಹೋಗಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಕೆಲಸ ಮುಗಿಸಿಕೊಂಡು ಸಂಜೆ **4.30** ಕ್ಕೆ ಸಾರಿಗೆ ಬಸ್ಸಿನಲ್ಲಿ ಚಾಸಾ.**2** ಮತ್ತು **3** ರವರೊಂದಿಗೆ ಬರುತ್ತಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸಂಜೆ **5.00** ಕ್ಕೆ ಖಾಂಡ್ಯ ದೇವಾಲಯದ ಆರ್ಚ್ ಬಳಿ ಬಸ್ಸು ಹೋಗುವಾಗ ನಾನು ಡೋರ್ ಪಕ್ಕದಲ್ಲಿ ನಿಂತಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗಳು ರಸ್ತೆ ಮಧ್ಯದಲ್ಲಿ ಪೋನು ಮಾಡಿಕೊಂಡು ನಿಂತಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನಾನು ಆರೋಪಿತರಿಗೆ ಸೈಡಿಗೆ ಹೋಗುವಂತೆ ಹೇಳಿದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅದಕ್ಕೆ ಆರೋಪಿತರು ನನಗೆ ಕೆಟ್ಟದಾಗಿ ಬೈದು ಜಗಳ ಮಾಡಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಬಸ್ಸು ಮುಂದೆ ಹೋಗಿ ಉಜಿನಿ ಬಸ್ಸು ಸ್ಟಾಂಡು ಬನ್ನಿ ಮಹಾಕಾಳಿ ದೇವಸ್ಥಾನದ ಬಳಿ ನಿಂತಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಆರೋಪಿತರು ನನ್ನನ್ನು ಬಸ್ಸಿನಿಂದ ಇಳಿಯುವಂತೆ ಹೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಆರೋಪಿತರು ಬಸ್ಸಿನಿಂದ ನನ್ನ ಕೈ ಹಿಡಿದು ಎಳೆದು ನನ್ನ ಎಡ ಕಪಾಳಕ್ಕೆ, ಬಲಭುಜಕ್ಕೆ ಮತ್ತು ಕುತ್ತಿಗೆ ಬೆನ್ನಿಗೆ ಹೊಡೆದು, ನಾನು ಧರಿಸಿದ್ದ ಬಟ್ಟೆಯನ್ನು ಹರಿದು ಹಾಕಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಆರೋಪಿತರು ಸೂಳೇ ಮಗನೇ, ಬೋಳಿ ಮಗನೆ, ಎಸ್.ಸಿ. ಜಾತಿನಾಡ ಎಂದು ಜಾತಿ ನಿಂದನೆ ಮಾಡಿ, ಅಲ್ಲಿಂದ ಆರೋಪಿತರು ಹೋಗುವಾಗ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎನ್ನುವುದು ಸುಳ್ಳು

ಎಂದರೆ ಸರಿಯಲ್ಲ.

13. ನಂತರ ಚಾಸಾ.2 ಮತ್ತು 3 ರವರು ಜಗಳ ಬಿಡಿಸಿ ನನ್ನನ್ನು ಮನೆಗೆ ಕರೆದುಕೊಂಡು ಹೋಗಿ ಬಿಟ್ಟರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ರಾತ್ರಿ 8.00 ಗಂಟೆಗೆ ನನಗೆ ನೋವು ಜಾಸ್ತಿಯಾಗಿದ್ದರಿಂದ ನನ್ನ ತಾಯಿಯಾದ ಚಾಸಾ.7 ರವರ ಜೊತೆ ಆಟೋದಲ್ಲಿ ಕಡಬಗೆರೆಗೆ ಬಂದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಸರ್ಕಾರಿ ಬಸ್ಸಿನಲ್ಲಿ ಚಿಕ್ಕಮಗಳೂರು ಮಲ್ಲೆಗೌಡ ಆಸ್ಪತ್ರೆಯಲ್ಲಿ ದಾಖಲಾದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಕಾಲಕ್ಕೆ ಆರೋಪಿತರ ವಿರುದ್ಧ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

14. ದೂರು ದಾಖಲಾದ ನಂತರ ಪೋಲೀಸರು ಮಹಜರು ಮಾಡಲು ದಿ:10.01.2018 ರಂದು ಸ್ಥಳಕ್ಕೆ ಬಂದಿದ್ದರು, ಆ ಸಮಯದಲ್ಲಿ ಪೋಲೀಸರಿಗೆ ನಾನೇ ಸ್ಥಳವನ್ನು ತೋರಿಸಿದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಂಚರಾಗಿ ಚಾಸಾ.8 ಮತ್ತು 9 ರವರು ಇದ್ದು, ನಾನು ಸ್ಥಳ ತೋರಿಸಿದ ಮೇರೆಗೆ ಪೋಲೀಸರು ಸ್ಥಳವನ್ನು ಪರಿಶೀಲಿಸಿ ಮಹಜರು ಜರುಗಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮೊದಲ ಮಹಜರನ್ನು ಉಜಿನಿ ಬಸ್ಸು ನಿಲ್ದಾಣದ ಮಹಾಕಾಳಿ ದೇವಸ್ಥಾನದ ಹತ್ತಿರ ಮಹಜರು ಜರುಗಿಸಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಮುಂದುವರೆದು ಮಹಜರನ್ನು ಖಾಂಡ್ಯ ಗೇಟಿನ ಹತ್ತಿರ ಇರುವ ಆರ್ಚ ಬಳಿ ಮಹಜರು ಜರುಗಿಸಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮಹಜರನ್ನು ಮದ್ಯಾಹ್ನ 3.00 ರಿಂದ 5.00 ರವರೆಗೆ ಬರೆದಾಗ,

ಸದರಿ ಮಹಜರಿಗೆ ನಾನು, ಚಾಸಾ.8 ಮತ್ತು 9 ರವರು ಸಹಿ ಮಾಡಿರುತ್ತೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸ ಇ ಎ ಒ

**ಸಹಿ/-**
**(ಬಿ.ಪುಷ್ಪಾಂಜಲಿ)**
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಅ.